


# ಆಂದೋಲನ

ದಿನಪತ್ರಿಕೆ

ಸಂಪಾದಕ : ರಾಜಶೇಖರ ಕೋಟಿ




ಭಾರತೀಯ ನೌಕಾಪಡೆಯ ಆರು ಮಹಿಳಾ ಸಿಬ್ಬಂದಿಯಷ್ಟೇ ನೌಕೆಯಲ್ಲಿ ವಿಶ್ವ ಪರ್ಯಟನೆ ಮಾಡಲು ಹೊರಟಿರುವ 'ನಾವಿಕ ಸಾಗರ ಪರಿಕ್ರಮ'ಕ್ಕೆ ನೂತನ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ ಗೋವಾದ ಪಣಜಿಯಲ್ಲಿ ಚಾಲನೆ ನೀಡಿದರು.



**ಮಹಿಳೆಯರ ನೌಕಾಯಾನಕ್ಕೆ ರಕ್ಷಣಾ ಸಚಿವೆ ಚಾಲನೆ**

**ಚಿರತೆ ದತ್ತು ಪಡೆದ ಕ್ರಿಕೆಟ್ ತಾರೆ ವೇದಾ**



ಗರಿಷ್ಠ: ೨೭° । ಕನಿಷ್ಠ: ೧೭° ಮೋಡಕವಿದ ವಾತಾವರಣ ಸಾಧಾರಣ ಮಳೆ ಸಂಭವ

ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ವೇದಾ ಕೃಷ್ಣಮೂರ್ತಿ ಅವರು ಚಾಮರಾಜೇಂದ್ರ ಮೃಗಾಲಯದಲ್ಲಿ ಭಾವನಾ (೩ ವರ್ಷ) ಹೆಸರಿನ ಚಿರತೆಯನ್ನು ವರ್ಷದ ಅವಧಿಗೆ ೩೫,೦೦೦ ರೂ. ನೀಡಿ ದತ್ತು ಪಡೆದಿದ್ದಾರೆ.

ಸಂಪುಟ: ೪೬ ಸಂಚಿಕೆ: ೨೪೪, ರಾಷ್ಟ್ರೀಯ ಶಕ ೧೯೩೯ ಶರತ್ –ಭಾದ್ರಪದ ೨೦ ● ಷಷ್ಠಿ– ಭರಣಿ, ಸೋಮವಾರ, ಸೆ.೧೧, ೨೦೧೭, ದೂರವಾಣಿ: ೨೪೪೯೫೩೧, ೨೪೪೯೫೩೪, ೨೪೪೯೫೩೫, ಫ್ಯಾಕ್ಸ್: ೨೪೪೯೫೩೩, ಪುಟ: ೧೨, ರೂ. ೩



ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಅರಮನೆ ವಿದ್ಯುತ್ ದೀಪ ವ್ಯವಸ್ಥೆಗೆ ಹೊಸ ಬಲ್ಬ್‌ಗಳನ್ನು ಅಳವಡಿಸಲಾಗಿದೆ. ಭಾನುವಾರ ಅರಮನೆ ವಿದ್ಯುತ್ ದೀಪಾಲಂಕಾರದಲ್ಲಿ ಝಗಮಗಿಸುತ್ತಿರುವ ದೃಶ್ಯ.

# ವೈವಿಧ್ಯ ದಸರಾಗೆ ಸಿಎಂ ಸೂಚನೆ

## ಕಾರ್ಯಕ್ರಮಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಅಧಿಕಾರಿಗಳಿಗೆ ಆದೇಶ

ಮೈಸೂರು,ಸೆ.೧೦– ನಾಡಿನ ಸಂಸ್ಕೃತಿ, ಇತಿಹಾಸ, ಪರಂಪರೆ ಬಿಂಬಿಸುವ ನಾಡಹಬ್ಬ ದಸರಾ ಮಹೋತ್ಸವವನ್ನು ರೂಢಿಗತ ಕ್ರಮಗಳಿಗೆ ಯಾವುದೇ ಚ್ಯುತಿ ಬಾರದಂತೆ ವೈಭವೋಪೇತವಾಗಿ ನಡೆಸಲು ಅಗತ್ಯವಾದ ಪೂರ್ವ ಸಿದ್ಧತೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು. ದಸರಾ ಮಹೋತ್ಸವ ಕಾರ್ಯಕ್ರಮಗಳಲ್ಲಿ ವೈವಿಧ್ಯತೆ, ಗುಣಮಟ್ಟವನ್ನೂ ಕಾಯ್ದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ನಗರದ ತೊಣಚಿಕೊಪ್ಪಲಿನಲ್ಲಿರುವ ತಮ್ಮ ನಿವಾಸದಲ್ಲಿ ಭಾನುವಾರ ಅಧಿಕಾರಿಗಳ ಸಭೆ ನಡೆಸಿದ ಅವರು, ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಹಾಗೂ ದಸರಾಕ್ಕೆ ಆಗಿರುವ ಸಿದ್ಧತೆಗಳ ಬಗ್ಗೆ ವಿವಿಧ ಮಾಹಿತಿಗಳನ್ನು ಜಿಲ್ಲಾಧಿಕಾರಿ ಡಿ.ರಂದೀಪ್ ಅವರಿಂದ ಪಡೆದುಕೊಂಡರು.

ವಿಜಯದಶಮಿಯಂದು ಜಂಬೂ ಸವಾರಿ ಮೆರವಣಿಗೆ ಸಾಗುವ ಮಾರ್ಗ, ಅರಮನೆಯಿಂದ ಬನ್ನಿಮಂಟಪದವರೆಗಿನ ರಸ್ತೆಯಲ್ಲಿನ ಪಾದಚಾರಿ ಮಾರ್ಗಗಳ ಕಾಮಗಾರಿಗಳನ್ನು ಆದಷ್ಟೂ ಬೇಗ ಪೂರ್ಣಗೊಳಿಸಬೇಕು. ಅಲ್ಲದೇ ನಗರದ ಪ್ರಮುಖ ರಸ್ತೆಗಳ ದುರಸ್ತಿ, ಡಾಂಬರೀಕರಣವನ್ನು ತ್ವರಿತವಾಗಿ ಮುಗಿಸಬೇಕು ಎಂದು ಸೂಚನೆ ನೀಡಿದರು.



- ನಾಡಹಬ್ಬ ದಸರಾ ಮಹೋತ್ಸವ ರೂಢಿಗತ ಕ್ರಮಗಳು ಯಾವುದೇ ಚ್ಯುತಿ ಬಾರದಂತೆ ವೈಭವೋ ಪೇತವಾಗಿರಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ
- ಜಂಬೂ ಸವಾರಿ ಮಾರ್ಗದಲ್ಲಷ್ಟೇ ಅಲ್ಲ, ಪ್ರಮುಖ ಸ್ಥಳ, ವೃತ್ತಗಳಲ್ಲಿಯೂ ವಿದ್ಯುತ್ ದೀಪಾಲಂಕಾರವಿರಲಿ
- ದಸರಾ ಕಾರ್ಯಕ್ರಮ ಆಮಂತ್ರಣ ಪತ್ರಿಕೆಗಳಲ್ಲಿ ಶಿಷ್ಟಾಚಾರಕ್ಕೆ ಚ್ಯುತಿಯಾಗದಿರಲಿ
- ಸ್ತಬ್ಧಚಿತ್ರಗಳಲ್ಲಿ ಮತ್ತು ಸಾಂಸ್ಕೃತಿಕ ತಂಡಗಳಲ್ಲಿ ವೈವಿಧ್ಯತೆ ಇರಲಿ, ಗುಣಮಟ್ಟವನ್ನೂ ಕಾಯ್ದುಕೊಳ್ಳಿ
- ವಸ್ತು ಪ್ರದರ್ಶನ ಉದ್ಘಾಟನೆಗೂ ಮುನ್ನವೇ ಎಲ್ಲ ಮಳಿಗೆ ಸಿದ್ಧವಾಗಿರುವಂತೆ ನೋಡಿಕೊಳ್ಳಿ

**ಪ್ರಮುಖ ವೃತ್ತಗಳಲ್ಲಿ ದೀಪಾಲಂಕಾರ:** ಜಂಬೂ ಸವಾರಿಯ ಮೆರವಣಿಗೆ ಸಾಗುವ ಮಾರ್ಗದಲ್ಲಿ ಮಾತ್ರವೇ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಕಲ್ಪಿಸುವುದಲ್ಲ, ನಗರದ ವಿವಿಧೆಡೆ ಪ್ರಮುಖ ಸ್ಥಳಗಳಲ್ಲಿ ಹಾಗೂ ವೃತ್ತಗಳಲ್ಲಿಯೂ ವಿದ್ಯುತ್ ದೀಪಾಲಂಕಾರಕ್ಕೆ ಕ್ರಮ ಕೈಗೊಳ್ಳಿರಿ ಎಂದು ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ತಿಳಿಸಿದರು.

**ವೈವಿಧ್ಯ–ಗುಣಮಟ್ಟ ಮುಖ್ಯ:** ದಸರಾ ಮಹೋತ್ಸವದ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳಲ್ಲಿ ಶಿಷ್ಟಾಚಾರಕ್ಕೆ ಚ್ಯುತಿಯಾಗದಂತೆ ಎಚ್ಚರ ವಹಿಸಬೇಕು. ದಸರಾ ಮೆರವಣಿಗೆಯಲ್ಲಿ ಭಾಗವಹಿಸುವ ಸ್ತಬ್ಧಚಿತ್ರಗಳಲ್ಲಿ ಮತ್ತು ಸಾಂಸ್ಕೃತಿಕ ತಂಡಗಳಲ್ಲಿ ವೈವಿಧ್ಯತೆ ಇರಬೇಕು. ಅಷ್ಟೇ ಅಲ್ಲ, ಗುಣಮಟ್ಟವನ್ನೂ ಕಾಯ್ದುಕೊಳ್ಳಬೇಕು ಎಂದು ಒತ್ತಿ ಹೇಳಿದರು.

ವಸ್ತು ಪ್ರದರ್ಶನ ಉದ್ಘಾಟನೆಗೂ ಮುನ್ನವೇ ಅಲ್ಲಿ ಎಲ್ಲಾ ಮಳಿಗೆಗಳು ಸಿದ್ಧವಾಗಿರುವಂತೆ ನೋಡಿಕೊಳ್ಳಿ ಎಂದು ದಸರಾ ಉಸ್ತುವಾರಿ ಹೊತ್ತಿರುವ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ಸೂಚಿಸಿದರು.

ಇದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ಪ್ರಮುಖ ರಸ್ತೆಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ದಸರಾ ಮಹೋತ್ಸವ ಆರಂಭಕ್ಕೂ ಮುನ್ನವೇ ಪೂರ್ಣ ಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಜಂಬೂಸವಾರಿ ಸಾಗುವ ಮಾರ್ಗದಲ್ಲಿನ ರಸ್ತೆಯನ್ನು ಈಗಾಗಲೇ ಕಾಂಕ್ರೀಟ್ ಮಾಡಲಾಗಿದೆ. ಕೆಲವೆಡೆ ಮಳೆಗಾಲ ಮುಗಿದ ಬಳಿಕ ಕಾಂಗ್ರೀಟ್ ಮಾಡಲು ಸೂಚಿಸಲಾಗಿದೆ. ನಗರದ ಪ್ರಮುಖ ರಸ್ತೆಗಳಲ್ಲಿ ಗುಂಡಿ, ಹಳ್ಳ–ಕೊಳ್ಳಗಳನ್ನು ಮುಚ್ಚುವಂತೆಯೂ ಕಟ್ಟುನಿಟ್ಟು ಸೂಚನೆ ನೀಡಲಾಗಿದೆ ಎಂದು ವಿವರಿಸಿದರು.

ಇದೇ ವೇಳೆ ಸುದ್ದಿಗಾರರಿಂದ ರಸ್ತೆ ಕಾಮಗಾರಿ ಕುರಿತು ಎದುರಾದ ಪ್ರಶ್ನೆಗೆ ಮುಖ್ಯಮಂತ್ರಿಗಳು, ನಗರದ ರಸ್ತೆಗಳು ಚೆನ್ನಾಗಿ ಇರಬೇಕೆಂದು ನೀವೇ ಹೇಳುತ್ತೀರಿ. ಕಾಮಗಾರಿ ಮಾಡಿದರೆ ಮಳೆಗಾಲದಲ್ಲಿ ರಸ್ತೆ ರಿಪೇರಿ ಅನ್ನುತ್ತೀರಾ ಎಂದು ಮರುಪ್ರಶ್ನಿಸಿದರು.

ಮಳೆ ಬರುತ್ತಿರುವುದರಿಂದ ಕೆಲವು ಕಾಮಗಾರಿ ಆದಷ್ಟೂ ಬೇಗ ಮುಗಿಸಲಾಗುವುದು. ಕಾಮಗಾರಿ ಪೂರ್ಣಗೊಳಿಸಲು ಸಾಧ್ಯವಾಗದಿದ್ದೆಡೆ ಸದ್ಯಕ್ಕೆ ಗುಂಡಿಗಳನ್ನಾದರೂ ಮುಚ್ಚಿಸಿ ವಾಹನಗಳ ಸರಾಗ ಓಡಾಟಕ್ಕೆ ಅವಕಾಶ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ದಕ್ಷಿಣ ವಲಯ ಐಜಿಪಿ ವಿಪುಲ್ ಕುಮಾರ್, ದಸರಾ ವಿಶೇಷಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಡಿ.ರಂದೀಪ್, ನಗರ ಪೊಲೀಸ್ ಆಯುಕ್ತ ಡಾ.ಎ.ಸುಬ್ರಹ್ಮಣ್ಯೇಶ್ವರ ರಾವ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಶಿವಶಂಕರ್, ಜಿಲ್ಲಾ ಪೊಲೀಸ್ ಅಧೀಕ್ಷಕ ರವಿ ಡಿ.ಚನ್ನಣ್ಣನವರ್ ಮತ್ತು ಅಪರ ಜಿಲ್ಲಾಧಿಕಾರಿ ಟಿ.ಯೋಗೇಶ್, ನಗರಪಾಲಿಕೆ ಆಯುಕ್ತ ಜಿ.ಜಗದೀಶ್ ಮತ್ತಿತರ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

# ಮುಕ್ತ ವಿವಿಗೆ ಸದ್ಯಕ್ಕಿಲ್ಲ ಮಾನ್ಯತೆ

## ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ ಟ್ವೀಟ್

ಮೈಸೂರು,ಸೆ.೧೦– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ಸದ್ಯಕ್ಕೆ ಮಾನ್ಯತೆ ದೊರೆಯುವ ಸಂಭವವಿಲ್ಲ ಎಂದು ರಾಜ್ಯದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ, ಭಾನುವಾರ ಟ್ವೀಟ್ ಮಾಡಿದ್ದಾರೆ. ಈ ಸುದ್ದಿ ಲಕ್ಷಾಂತರ ಶಿಕ್ಷಣಾರ್ಥಿಗಳ ಕನಸನ್ನು ಭಗ್ನಗೊಳಿಸಿದೆ.

ಕೆಲ ದಿನಗಳಲ್ಲೇ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ಮಾನ್ಯತೆ ಸಿಗಲಿದೆ. ಬಳಿಕ ತಮಗೆಲ್ಲಾ ಪದವಿ ಪ್ರಮಾಣಪತ್ರ ದೊರೆಯಲಿದೆ ಎಂದು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದ ವಿದ್ಯಾರ್ಥಿಗಳಿಗೆ ದೊಡ್ಡ ಆಘಾತ ಎದುರಾಗಿದೆ. ಅಷ್ಟೇ ಅಲ್ಲ ಸಾವಿರಾರು ವಿದ್ಯಾರ್ಥಿಗಳ, ಪದವೀಧರರ ಭವಿಷ್ಯ ಅತಂತ್ರವಾಗಿದೆ.



- ಸಂಕಷ್ಟದಲ್ಲಿ ೯೫ ಸಾವಿರ ವಿದ್ಯಾರ್ಥಿಗಳು
- ಪ್ರಸಕ್ತ ಶೈಕ್ಷಣಿಕ ವರ್ಷಕ್ಕೂ ಇಲ್ಲ ಮಾನ್ಯತೆ
- ಫಲ ನೀಡದ ಜೂ.೨೧ರ ಎಚ್‌ಆರ್‌ಡಿ ಸಭೆ

ವಿಶ್ವವಿದ್ಯಾನಿಲಯ ಅನುದಾನ ಆಯೋಗ(ಯುಜಿಸಿ)ದ ನಿಯಮಾವಳಿಗಳಡಿ ಹೊರಡಿಸಲಾದ ಆದೇಶದ ಪ್ರಕಾರ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯಕ್ಕೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಮಾನ್ಯತೆ ದೊರೆಯುವುದು ಸಾಧ್ಯತೆ ಇಲ್ಲವಾಗಿದೆ. ಈಗಾಗಲೇ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವವರು, ಪರೀಕ್ಷೆ ಎದುರಿಸಲು ತಯಾರಾಗಿದ್ದವರು ದಿಕ್ಕು ಕಾಣದಂತಾಗಿದ್ದಾರೆ.

ಹೊಸ ನಿಯಮ ಜಾರಿಯಾದರಷ್ಟೇ ಮುಕ್ತ ವಿವಿಗೆ ಮಾನ್ಯತೆ ಸಿಗಲಿದೆ ಎಂದು ರತ್ನಪ್ರಭಾ ಟ್ವೀಟ್ ಮಾಡಿದ್ದಾರೆ.

⏭ ೯

# ನಾಳೆ ನಾನು ಗೌರಿ ರಾಷ್ಟ್ರೀಯ ಸಮಾವೇಶ

## ಗೌರಿ ಲಂಕೇಶ್ ಹತ್ಯಾ ವಿರೋಧಿ ವೇದಿಕೆ ಆಯೋಜನೆ



ಬೆಂಗಳೂರು,ಸೆ.೧೦– ಗೌರಿ ಲಂಕೇಶ್ ಆಶಯಗಳನ್ನು ಮುಂದುವರಿಸುವ ದೃಷ್ಟಿಯಿಂದ ನಗರದಲ್ಲಿ ಮಂಗಳವಾರ ರಾಷ್ಟ್ರ ಮಟ್ಟದ ಸಮಾವೇಶ ಹಮ್ಮಿಕೊಂಡಿದ್ದು, ಪ್ರಗತಿಪರ ಚಿಂತಕರು, ಸಾಹಿತಿಗಳು, ಪತ್ರಕರ್ತರು ಸೇರಿ ಸಾರ್ವಜನಿಕರು ಭಾರೀ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಭಾನುವಾರ ಸುದ್ದಿಗೋಷ್ಠಿ ನಡೆಸಿದ ಹಿರಿಯ ಸಾಹಿತಿ ಡಾ.ಚಂದ್ರಶೇಖರ್ ಪಾಟೀಲ್ ಅವರು, ಗೌರಿ ಲಂಕೇಶ್ ಹತ್ಯಾ ವಿರೋಧಿ ವೇದಿಕೆ 'ನಾನು ಗೌರಿ' ಶೀರ್ಷಿಕೆಯಡಿ ಈ ಸಮಾವೇಶ ಹಮ್ಮಿಕೊಂಡಿದೆ ಎಂದರು.

⏭ ೯

## ಹಿರಿಯ ಕಲಾವಿದೆ ಬಿ.ವಿ.ರಾಧಾ ನಿಧನ



ಬೆಂಗಳೂರು,ಸೆ.೧೦– ಕನ್ನಡ ಸೇರಿದಂತೆ ದಕ್ಷಿಣ ಭಾರತದ ೩೦೦ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದ ಹಿರಿಯ ಕಲಾವಿದೆ ಬಿ.ವಿ. ರಾಧಾ(೭೦) ಬೆಂಗಳೂರಿನಲ್ಲಿ ಭಾನುವಾರ ಹೃದಯಾಘಾತದಿಂದ ನಿಧನರಾದರು.

೧೯೬೪ರಲ್ಲಿ 'ನವಕೋಟಿ ನಾರಾಯಣ' ಸಿನೆಮಾ ಮೂಲಕ ಕನ್ನಡ ಚಲನಚಿತ್ರ ರಂಗ ಪ್ರವೇಶಿಸಿದ ಬಿ.ವಿ.ರಾಧಾ ಅವರುಮೂಲ ಹೆಸರು ರಾಜಲಕ್ಷ್ಮಿ.

ಕನ್ನಡದ ಮೇರುನಟ ಡಾ.ರಾಜ್‌ಕುಮಾರ್ ಸೇರಿದಂತೆ ಅನೇಕ ದಿಗ್ಗಜ ನಟರೊಂದಿಗೆ ಬಿ.ವಿ.ರಾಧಾ ಅಭಿನಯಿಸಿದ್ದಾರೆ. ತಮಿಳು ಮತ್ತು ತೆಲುಗು ಚಿತ್ರಗಳಲ್ಲಿಯೂ ಅವರು ಪಾತ್ರ ವಹಿಸಿದ್ದರು. ಅಂದಿನ ದಿಗ್ಗಜ ಕಲಾವಿದರಾದ ಎಂ.ಜಿ.ರಾಮಚಂದ್ರನ್, ಎನ್.ಟಿ. ರಾಮರಾವ್, ಶಿವಾಜಿ ಗಣೇಶನ್, ಅಕ್ಕಿನೇನಿ ನಾಗೇಶ್ವರ್ ರಾವ್ ಅವರೊಂದಿಗೂ ಹಲವು ಚಲನ ಚಿತ್ರಗಳಲ್ಲಿ ರಾಧಾ ಅಭಿನಯಿಸಿದ್ದರು.

(ವಿವರ ಪುಟ ೯)

# ಜಲಪಾತೋತ್ಸವಕ್ಕೆ ಚಂದನವನ ರಂಗು

## ನಟ ಯಶ್-ರಾಧಿಕಾ ದಂಪತಿಗೆ ಸನ್ಮಾನ; ಸಾಧು ಸಂಗೀತ



ಚುಂಚನಕಟ್ಟೆ ಜಲಪಾತೋತ್ಸವ ಸಮಾರೋಪದಲ್ಲಿ ಭಾನುವಾರ ರಾತ್ರಿ ನಟ ಯಶ್-ರಾಧಿಕಾ ದಂಪತಿಗೆ ಸನ್ಮಾನ ನೆರವೇರಿತು. ಸಂಸದ ಸಿ.ಎಸ್.ಪುಟ್ಟರಾಜು, ಶಾಸಕ ಸಾ.ರಾ.ಮಹೇಶ್, ಮೈಸೂರು ಮಹಾಪೌರ ರವಿಕುಮಾರ್, ಚಿತ್ರನಟ ಸಾಧುಕೋಕಿಲ, ಜಿಪಂ ವಿಪಕ್ಷ ನಾಯಕ ಡಿ.ರವಿಶಂಕರ್, ಸದಸ್ಯ ಅಮಿತ್, ನಿರೂಪಕಿ ನಟಿ ಅಪರ್ಣಾ ಮತ್ತಿತರರು ಚಿತ್ರದಲ್ಲಿದ್ದಾರೆ.

ಕೆ.ಆರ್.ನಗರ,ಸೆ.೧೦– ಇಲ್ಲಿಗೆ ಸಮೀಪದ ಚುಂಚನಕಟ್ಟೆಯ ಧನುಷ್ಕೋಟಿ ಜಲಪಾತದಲ್ಲಿ ಶನಿವಾರ ಚಾಲನೆ ಪಡೆದಿದ್ದ ಜಲಪಾತೋತ್ಸವ ಭಾನುವಾರ ರಾತ್ರಿ ಚಿತ್ರತಾರೆಯರು ಉಣಬಡಿಸಿದ ಸಂಗೀತದ ರಸದೌತಣದೊಂದಿಗೆ ಪರಿಸಮಾಪ್ತಿಗೊಂಡಿತು.

ವರ್ಣರಂಜಿತ ವಿದ್ಯುತ್ ದೀಪಾಲಂಕಾರಗಳು ಜಲಪಾತೋತ್ಸವಕ್ಕೆ ಮೆರಗು ನೀಡಿದ್ದರೆ, ಚಂದನವನದ ಕಲಾವಿದ ದಂಪತಿ ಯಶ್–ರಾಧಿಕಾ ಪಂಡಿತ್, ಸಾಧುಕೋಕಿಲಾ ಮತ್ತು ತಂಡದವರು ಪ್ರಸ್ತುತಪಡಿಸಿದ 'ಮ್ಯೂಸಿಕಲ್ ನೈಟ್' ಕಾರ್ಯಕ್ರಮದ ಮೆರುಗನ್ನು ನೂರ್ಮಡಿಗೊಳಿಸಿತ್ತು.

ಜಲಪಾತೋತ್ಸವ ಸಮಾರೋಪಕ್ಕೆ ಸೇರಿದ್ದ ಸಾವಿರಾರು ಪ್ರೇಕ್ಷಕ ಹಾಗೂ ಪ್ರವಾಸಿಗರು ಸ್ಯಾಂಡಲ್‌ವುಡ್‌ನ ನೆಚ್ಚಿನ ತಾರೆಯರನ್ನು ಕಣ್ತುಂಬಿಕೊಂಡಿದ್ದಲ್ಲದೇ ಸಂಗೀತ ಸಂಜೆಗೆ ತಲೆದೂಗಿದರು. ಕಾರ್ಯಕ್ರಮದಲ್ಲಿ ಸಂಸದ ಸಿ.ಎಸ್.ಪುಟ್ಟರಾಜು ಮಾತನಾಡಿ, ಜಲಪಾತೋತ್ಸವ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಚಾರ ಮತ್ತು ಕಾರ್ಯಕ್ರಮದೊಂದಿಗೆ ವಿಶ್ವದಾದ್ಯಂತ ಪ್ರಚಾರ ಪಡೆದು ಪ್ರವಾಸಿಗರನ್ನು ಆಕರ್ಷಿಸಲಿ.

> ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಪ್ರವಾಸೋದ್ಯಮ ಕೇಂದ್ರಗಳನ್ನಾಗಿಸುವ ಕೆಲಸವನ್ನು ಪ್ರವಾಸೋದ್ಯಮ ಇಲಾಖೆ ಮಾಡಬೇಕು. ಆ ಮೂಲಕ ಯುವ ಪೀಳಿಗೆಗೆ ನಾಡಿನ ಭವ್ಯ ಇತಿಹಾಸವನ್ನು ತಿಳಿಸಿಕೊಡಬೇಕು.
>
> -ಯಶ್, ಚಿತ್ರನಟ

⏭ ೯

ಆಸ್ಟ್ರೇಲಿಯಾ ಏಕದಿನ ಸರಣಿಗೆ ಭಾರತ ತಂಡ ಪ್ರಕಟ ⏭ ವರದಿ ಪುಟ ೧೧

ನಿರಾಶ್ರಿತರಾದ ದ್ರೋಣ, ಕಾವೇರಿ ⏭ ವರದಿ ಪುಟ ೨

ಮಹದಾಯಿ; ೭ ರೈತರಿಂದ ಆಮರಣಾಂತ ಉಪವಾಸ ⏭ ವರದಿ ಪುಟ ೧೦

ಎರ್ಮಾ ಚಂಡ ಮಾರುತ; ಫ್ಲೋರಿಡಾದಿಂದ ೫೬ ಲಕ್ಷ ಜನ ಸ್ಥಳಾಂತರಕ್ಕೆ ಸೂಚನೆ ⏭ ವರದಿ ಪುಟ ೧೦

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 393
ದೂರವಾಣಿ: 2425156

Monday 11 September 2017
ಅಂತರ ಜಾಲ ವಿಳಾಸ
ಆಂದೋಲನ
andolana.epapertoday.com
ಸುದ್ದಿಗಾಗಿ
andolana@gmail.com
ಜಾಹೀರಾತಿಗಾಗಿ
advtandolana@gmail.com

